13 DEC 2017

<u>ದಿನಾಂಕ: 08.12.2017ರಂದು ಶ್ರೀರಂಗಪಟ್ಟಣ ಉಪ-ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು</u>

<u>ಹಾಜರಿದ್ದ ಅಧಿಕಾರಿ/ನೌಕರರು:</u>

<u>ಶ್ರೀಯುತ/ಶ್ರೀಮತಿ/ಕು</u>

1) ರವಿಶಂಕರ್ : ಅಧ್ಯಕ್ಷರು - ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ವೃತ್ತ
2) ಶ್ರೀನಿವಾಸಮೂರ್ತಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಪಾಂಡವಪುರ ವಿಭಾಗ
3) ಪ್ರಕಾಶ್ : ಲೆಕ್ಕಾಧಿಕಾರಿ, ಪಾಂಡವಪುರ
4) ಮಹದೇವಪ್ಪ : ಲೆಕ್ಕಾಧಿಕಾರಿ (ಆಂ.ಪ), ಪಾಂಡವಪುರ
5) ಎಂ. ಮಂಜುನಾಥಪ್ರಸಾದ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ
6) ಆರ್. ಚನ್ನಕೇಶವ : ಸಹಾಯಕ ಇಂಜಿನಿಯರ್(ತಾಂ), ಶ್ರೀರಂಗಪಟ್ಟಣ
7) ಕೆ.ಎಂ. ಮಧುಸೂದನ್ : ಸಹಾಯಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ ಪಟ್ಟಣ ಶಾಖೆ
8) ಸುರೇಂದ್ರಮೋಹನ್ : ಪ್ರಭಾರ ಸಹಾಯಕ ಇಂಜಿನಿಯರ್(ವಿ), ಅರಕೆರೆ ಶಾಖೆ
9) ಎಂ.ಆರ್ ಪ್ರವೀಣ್ : ಪ್ರಭಾರ ಹಿರಿಯ ಸಹಾಯಕರು, ಶ್ರೀರಂಗಪಟ್ಟಣ ಉಪ-ವಿಭಾಗ
10) ಎನ್. ಶಿಲ್ಪ : ಕಿರಿಯ ಇಂಜಿನಿಯರ್(ವಿ), ಕೆ.ಶೆಟ್ಟಹಳ್ಳಿ ಶಾಖೆ
11) ನವೀನ್‌ಕುಮಾರ್ : ಕಿರಿಯ ಇಂಜಿನಿಯರ್(ವಿ), ನಗುವನಹಳ್ಳಿ ಶಾಖೆ
12) ಕೆ.ಆರ್. ರಾಜು : ಕಿರಿಯ ಇಂಜಿನಿಯರ್(ವಿ), ಕೊಡಿಯಾಲ ಶಾಖೆ
13) ಸಿದ್ದಪ್ಪಾಜಿ : ಪ್ರಭಾರ ಹಿರಿಯ ಸಹಾಯಕ, ಅರಕೆರೆ ಶಾಖೆ
14) ಮಂಜುನಾಥ : ಪ್ರಭಾರ ಸಹಾಯಕ ಇಂಜಿನಿಯರ್(ವಿ), ಬೆಳಗೊಳ ಶಾಖೆ
15) ವಿ. ಕುಮಾರಸ್ವಾಮಿ : ಪ್ರಭಾರ ಕಿರಿಯ ಆಪ್ತ ಸಹಾಯಕ, ಪಾಂಡವಪುರ

ಜನಸಂಪರ್ಕ ಸಭೆಯ ಅಧ್ಯಕ್ಷರು ಬೆಳಿಗ್ಗೆ 10.30ರಲ್ಲಿ ಸಭೆಯನ್ನು ಪ್ರಾರಂಭಿಸಿ, ಸ್ವಾಗತ ಭಾಷಣವನ್ನು ಮಾಡುವ ಮೂಲಕ ಸಭೆಗೆ ಹಾಜರಾಗಿದ್ದ ಅಧಿಕಾರಿ/ನೌಕರ ವರ್ಗದವರಿಗೆ, ಗ್ರಾಹಕರಿಗೆ ಹಾಗೂ ಪತ್ರಕರ್ತರಿಗೆ ಸ್ವಾಗತ ಕೋರುತ್ತಾ, ಶ್ರೀರಂಗಪಟ್ಟಣ ತಾಲ್ಲೋಕು ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ದೂರು ಮತ್ತು ಸಲಹೆಗಳನ್ನು ಮುಕ್ತವಾಗಿ ಚರ್ಚಿಸಲು ಕೋರಿದರು. ನಂತರ ಸಭೆಯಲ್ಲಿ ನೊಂದಾಯಿಸಲ್ಪಟ್ಟ ದೂರು ಮತ್ತು ದೂರಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

| | ದೂರು | ಕ್ರಮ |
|---|---|---|
| 1) | **ಶ್ರೀ ಎನ್.ಜೆ. ಪುಟ್ಟಸ್ವಾಮಿ, ನೆಲಮನೆ, ಮೊಬೈಲ್ ಸಂಖ್ಯೆ: 9901937832** | |
| | ಎ) ತಮ್ಮ ಐ.ಪಿ. ಸ್ಥಾವರಕ್ಕೆ ಅರ್ಜಿ ನೊಂದಾಯಿಸಿ ಹಣ ಕಟ್ಟಿದ್ದು, ಮೂಲಭೂತ ಸೌಕರ್ಯ ಕಲ್ಪಿಸಲು ಅಂದಾಜುಪಟ್ಟಿ ಸಲ್ಲಿಸಿ, ಕಾರ್ಯಾದೇಶ(B-1803)ವೂ ಸಹ ಮಂಜೂರಾಗಿದ್ದು, ಇದುವರೆಗೂ ಯಾವುದೇ ಕಾಮಗಾರಿ ಕೈಗೆತ್ತಿಕೊಂಡಿರುವುದಿಲ್ಲವೆಂದು ದೂರು ನೀಡಿರುತ್ತಾರೆ. | ಸದರಿ ಗ್ರಾಹಕರ ಕಾಮಗಾರಿಯನ್ನು ಜೇಷ್ಠತೆಯ ಆಧಾರದ ಮೇಲೆ ಸಾಮಗ್ರಿಗಳನ್ನು ನೀಡಿ ಅತೀ ಶೀಘ್ರದಲ್ಲಿ ಕೆಲಸವನ್ನು ಅವಾರ್ಡ್ ಆಗಿರುವ ಗುತ್ತಿಗೆದಾರರಿಂದ ಸಂಪೂರ್ಣವಾಗಿ ಕೆಲಸವನ್ನು ಮುಗಿಸಲು ಕ್ರಮಕೈಗೊಳ್ಳುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ತಿಳಿಸಿರುತ್ತಾರೆ. |
| 2) | **ಶ್ರೀ ಕೆ. ಕೃಷ್ಣ, ನೆಲಮನೆ ಮೊಬೈಲ್ ಸಂಖ್ಯೆ: 9741173997** | |
| | ಸದರಿ ಗ್ರಾಹಕರು ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ದಿನಾಂಕ: 14.08.2017ರಂದು ಸಂಪೂರ್ಣವಾಗಿ ಹಣ ಪಾವತಿಸಿದ್ದು, ಇದುವರೆಗೂ ಹಣ ಕಟ್ಟಿಸಿದ ಗುತ್ತಿಗೆದಾರರು ಆರ್.ಆರ್.ಸಂಖ್ಯೆಯನ್ನು ನೀಡಿಲ್ಲವೆಂದು ದೂರಿರುತ್ತಾರೆ. | ಸಭೆಯ ಅಧ್ಯಕ್ಷರು ಸಹಾಯಕ ಇಂಜಿನಿಯರ್(ತಾಂ) ರವರಿಗೆ ಆರ್.ಆರ್. ಸಂಖ್ಯೆ ನೀಡಲು ಸೂಚಿಸಿ, ಸದರಿ ಗ್ರಾಹಕರಿಗೆ ತಕ್ಷಣವೇ ವಿದ್ಯುಚ್ಛಕ್ತಿ ಸರಬರಾಜು ಕಲ್ಪಿಸಲು ನೀಡಲಾದ ಆರ್.ಆರ್. ಸಂಖ್ಯೆಯನ್ನು ತಾಂತ್ರಿಕ ಶಾಖೆಯಿಂದ ಕೊಡಿಸಿರುತ್ತಾರೆ. |

S.E.E (Elecl) Works Circle CESC Mandya
DCA
EEE(O) CAOC
AO Dvn.
AO (I/A)
SEE 13/12

AET p1.57 J.R. 15/12

6056 14/12

| | ದೂರು | ಕ್ರಮ |
|---|---|---|
| 3) | **ಶ್ರೀ ಎನ್.ಜಿ. ನಾಗರಾಜು, ನೆಲಮನೆ ಮೊಬೈಲ್ ಸಂಖ್ಯೆ: 9964462371** | |
| | ಸದರಿ ಗ್ರಾಹಕರಿಗೆ ಐ ಅಂಡ್ ಐ ಕಾಮಗಾರಿ ಯೋಜನೆಯಡಿ ಪ್ರತ್ಯೇಕ ಪರಿವರ್ತಕವು ಮಂಜೂರಾತಿಯಾಗಿದ್ದು, ಕಾಮಗಾರಿ ಸಂಪೂರ್ಣವಾಗದೆ ಇದುವರೆಗೂ ವಿದ್ಯುಚ್ಛಕ್ತಿ ಸರಬರಾಜು ಕಲ್ಪಿಸಿಲ್ಲವೆಂದು ಗ್ರಾಹಕರು ಆಕ್ಷೇಪಿಸಿರುತ್ತಾರೆ. | ಸದರಿ ಗ್ರಾಹಕರ ದೂರಿಗೆ ಸಭೆಯ ಅಧ್ಯಕ್ಷರು ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗುವ ಪರಿವರ್ತಕ ಮತ್ತು ಸಾಮಗ್ರಿಗಳನ್ನು ವಿಭಾಗೀಯ ಕಛೇರಿಯ ಉಗ್ರಾಣದಿಂದ ಕೊಡಿಸಲು ಒಪ್ಪಿಕೊಂಡಿದ್ದು, ತುರ್ತಾಗಿ ಸಹಾಯಕ ಇಂಜಿನಿಯರ್(ವಿ), ಪಟ್ಟಣ ಶಾಖೆ ರವರು ಸಾಮಗ್ರಿಗಳ ಪಟ್ಟಿಯನ್ನು ನೀಡಿ, ಕೆಲಸ ಸಂಪೂರ್ಣ ಮಾಡಲು ಆದೇಶಿಸಿರುತ್ತಾರೆ. |
| 4) | **ಶ್ರೀ ಮನೀಷ್ ಜೈನ್, ರಾಂಪುರ ಮೊಬೈಲ್ ಸಂಖ್ಯೆ: 9886579577** | |
| | ಸದರಿಯವರ ಗ್ರಾಹಕರ ಐ.ಪಿ. ಸೆಟ್ ಪರಿವರ್ತಕಕ್ಕೆ ಸುಮಾರು 15 ದಿನಗಳಿಂದ ಪದೇ ಪದೇ ಜಂಪ್ ಕಟ್ಟಾಗಿ ವೈರ್ ತುಂಡಾಗುತ್ತಿದ್ದು, ವಿದ್ಯುತ್ ವ್ಯತ್ಯಯವಾಗುತ್ತಿರುತ್ತದೆ. ಈ ವಿಚಾರವಾಗಿ ಸಹಾಯಕ ಇಂಜಿನಿಯರ್(ವಿ) ಮತ್ತು ಮಾರ್ಗದಾಳು ಮಂಜುರವರಿಗೆ ತಿಳಿಸಿದ್ದು, ಇದುವರೆಗೂ ದುರಸ್ಥಿ ಮಾಡದಿರುವುದಾಗಿ ಆಕ್ಷೇಪಿಸಿರುತ್ತಾರೆ. | ತಕ್ಷಣವೇ ಸಭೆಯ ಅಧ್ಯಕ್ಷರು ಸಹಾಯಕ ಇಂಜಿನಿಯರ್(ವಿ) ರವರಿಗೆ ಸದರಿ ಕ್ಯಾಂಪಿನ ಮಾರ್ಗದಾಳು ಆದ ಶ್ರೀ ಮಂಜುರವರನ್ನು ಸಭೆಗೆ ಕರೆಸುವಂತೆ ಆದೇಶಿಸಿ, ಲೈನ್‌ಮೆನ್ ಮಂಜುರವರು ಬಂದ ಮೇಲೆ ಸದರಿ ವಿಚಾರವಾಗಿ ಕೂಲಂಕಷವಾಗಿ ದುರಸ್ಥಿ ಬಗ್ಗೆ ಪರಿಶೀಲಿಸಿ, ತಕ್ಷಣವೇ ಗ್ರಾಹಕರಿಗೆ ವಿದ್ಯುಚ್ಛಕ್ತಿಯನ್ನು ಕಲ್ಪಿಸಲು ಆದೇಶಿಸಿ ದೂರು ಮರುಕಳಿಸದಂತೆ ಆದೇಶಿಸಿರುತ್ತಾರೆ. |
| 5) | **ಶ್ರೀ ಸೋಮಶೇಖರ್, ಅರಕೆರೆ ಮೊಬೈಲ್ ಸಂಖ್ಯೆ: 9141484948** | |
| | ಅರಕೆರೆ ಗ್ರಾಮದಲ್ಲಿರುವ 100ಕೆವಿಎ ಪರಿವರ್ತಕದ ಎರಡೂ ಕಂಬಗಳು ಅತೀಯಾಗಿ ಬಾಗಿದ್ದು, ಸದರಿ ಜಾಗದಲ್ಲಿ ಜನಸಾಮಾನ್ಯರು ಓಡಾಡುವ ಮತ್ತು ಕುಳಿತುಕೊಳ್ಳುವ ಪರಿಸ್ಥಿತಿ ಇರುವುದರಿಂದ, ಮುಂದೆ ಆಗಬಹುದಾದ ಅನಾಹುತವನ್ನು ತಡೆಗಟ್ಟಲು ಕೋರಿರುತ್ತಾರೆ. | ಸಭೆಯ ಅಧ್ಯಕ್ಷರು ಸದರಿ ಪ್ರಭಾರ ಸಹಾಯಕ ಇಂಜಿನಿಯರ್(ವಿ)ರವರಿಗೆ ತಕ್ಷಣವೇ ಸ್ಥಳ ಪರಿಶೀಲಿಸಿ, ಬಾಗಿರುವ ಕಂಬಗಳನ್ನು ಸರಿಪಡಿಸಲು ಅಂದಾಜು ಪಟ್ಟಿಯನ್ನು ತುರ್ತಾಗಿ ಸಲ್ಲಿಸಿ, ಆಗಬಹುದಾದ ಅನಾಹುತವನ್ನು ತಡೆಗಟ್ಟಲು ಆದೇಶಿರುತ್ತಾರೆ. |

ಸಭೆಯನ್ನು 1.30ಕ್ಕೆ ಮುಕ್ತಾಯಗೊಳಿಸುತ್ತಾ, ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿಹಾಜರುಪಡಿಸುವಂತೆ ಉಪ-ವಿಭಾಗಾಧಿಕಾರಿಯವರಿಗೆ ಸೂಚಿಸಲಾಯಿತು.

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಶ್ರೀರಂಪ/2017-18/ಸಿವೈಎಸ್-3048-56 ದಿನಾಂಕ: 8/12/2017

<u>ಪ್ರತಿಗಳನ್ನು ಇವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.</u>

1. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾವಿಸನಿನಿ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ನಿಗಮ ಕಾರ್ಯಾಲಯ, ಚಾವಿಸನಿನಿ, ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ, ಪಾಂಡವಪುರ.

<u>ಪ್ರತಿಗಳನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.</u>

1. ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ, ಪಾಂಡವಪುರ.
2. ಲೆಕ್ಕಾಧಿಕಾರಿ, ಆಂತರಿಕ ಲೆಕ್ಕ ಪರಿಶೋಧನೆ, ಚಾವಿಸನಿನಿ, ಪಾಂಡವಪುರ.
3. ಶಾಖಾಧಿಕಾರಿ, ಕಾರ್ಯ ಮತ್ತು ಪಾಲನೆ ಶಾಖೆ, ಚಾವಿಸನಿನಿ, ಶ್ರೀರಂಗಪಟ್ಟಣ/ನಗುವನಹಳ್ಳಿ/ಬೆಳಗೊಳ/ಕೆ.ಶೆಟ್ಟಹಳ್ಳಿ/ ಅರಕೆರೆ/ಕೊಡಿಯಾಲ.
4. ಕಛೇರಿ ಪ್ರತಿ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಚಾವಿಸನಿನಿ, ಶ್ರೀರಂಗಪಟ್ಟಣ.